ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾಕ್ಷೇತ್ರದಲ್ಲಿ ಗ್ರಂಥಾಲಯ ಸೌಲಭ್ಯ

319 - ಶ್ರೀ ವಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿ ಆರಂಭಗೊಳ್ಳುವ ಗ್ರಂಥಾಲಯ ಶಾಖೆಗಳು ಎಷ್ಟು?*

ಆ) *ದಕ್ಷಿಣ ಕನ್ನಡದ ಯಾವ ಯಾವ ಸ್ಥಳಗಳಲ್ಲಿ ಹೊಸ ಗ್ರಂಥಾಲಯ ಶಾಖೆಗಳನ್ನು ತೆರೆಯಲಾಗುವುದು.*

ಇ) *ಉಡುಪಿ ತಾಲ್ಲೂಕಿನ ಕೋಟಾ, ಸಸ್ತಾನ್, ಬ್ರಹ್ಮಾವರ, ಮಂದರ್ತಿ, ಸೈಬ್ರಕಟ್ಟೆ, ಪೆರಡೂರು, ಕರ್ಕೆ, ಈ ಸ್ಥಳಗಳಲ್ಲಿ ಗ್ರಂಥಾಲಯ ಶಾಖಾ ಆರಂಭಿಸುವಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?*

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) 300 ಗ್ರಂಥಾಲಯಗಳು.

ಆ)

	ತಾಲ್ಲೂಕು		ಊರುಗಳು
1.	ಕಾರ್ಕಳ	1.	ಬೆಳ್ಮಣ್ಣು
		2.	ನಂದಳಿಕೆ
2.	ಸೂಳ್ಯ	1.	ಅರಂತೋಡು
3.	ಬೆಳ್ತಂಗಡಿ	2.	ನೆಲೆಯ
4.	ಪುತ್ತೂರು	1.	ನೆಲ್ಯಾಡಿ
		2.	ಕಡಬ
5.	ಉಡುಪಿ	1.	ಸಿರಿಯೂರು
		2.	ಸೈಬ್ರಕಟ್ಟೆ
6.	ಮಂಗಳೂರು	1.	ಕಂದಾವರ
		2.	ಎಕ್ಕಾರು
		3.	ಕಟೀಲು
7.	ಕುಂದಾಪುರ	1.	ನಾವುಂದು
		2.	ಹೆಮ್ಮಾಡಿ
		3.	ಶಿರೂರು

ಇ) 1993-94ನೇ ಸಾಲಿನಲ್ಲಿ ಸೈಬ್ರಕಟ್ಟೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲಾಗುವುದು ಹಾಗೂ ಉಳಿದ ಸ್ಥಳಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು.

ಚನ್ನಪಟ್ಟಣದಲ್ಲಿ ವೃಕ್ಷ ಸಂರಕ್ಷಣಾ ಕಾಯ್ದೆ

254 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) ; ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ಕಾಯ್ದೆ 3ರಂತೆ ಪ್ರತಿಯೊಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ವೃಕ್ಷ ಪ್ರಾಧಿಕಾರವನ್ನು ರಚಿಸಲಾಗಿದೆಯೇ*

ಆ) *ಅಂತಹ ಪ್ರಾಧಿಕಾರವನ್ನು ಚನ್ನಪಟ್ಟಣ ತಾಲ್ಲೂಕಿನಲ್ಲಿ ರಚಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ರಚಿಸಲಾಗಿದೆ. (ಸದಸ್ಯರ ಹೆಸರನ್ನು ತಿಳಿಸುವುದು)*